ಕರ್ನಾಟಕ ಸರಕಾರ

# ಪ್ರವಾಸೋದ್ಯಮ ಇಲಾಖೆ

# ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಕಾರವಾರ, ಉತ್ತರ ಕನ್ನಡ ಜಿಲ್ಲೆ, ಇವರ ಕಾರ್ಯಾಲಯ

ದೂ:08382-221172 email- adtourismkarwar@gmail.com

ಪ್ರಇ/ಉ.ನಿ.ಕ/ಕಾ/2018-19 ದಿನಾಂಕ: 28-01-2020

## ಪ್ರಕಟಣೆ

**ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಗೋಕರ್ಣ ಗ್ರಾಮದ ಸರ್ವೆ ನಂ. 1567 ಕ್ಷೇತ್ರ 1-38-00 ಪ್ರವಾಸೋದ್ಯಮ ಇಲಾಖೆಯ ಜಾಗವನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಅರ್ಜಿ ಆಹ್ವಾನ**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಗೋಕರ್ಣ ಹೋಬಳಿಯ ಗೋಕರ್ಣ ಗ್ರಾಮದ ಸ.ನಂ. 1567 ಕ್ಷೇತ್ರ 1-38-00 ಪ್ರದೇಶವನ್ನು ಈಗಾಗಲೇ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸದ್ರಿ ಪ್ರದೇಶವನ್ನು ಪ್ರವಾಸೋದ್ಯಮ ಇಲಾಖೆಯ ಹೆಸರಿನಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಈ ಹಿಂದೆ ನಿರ್ಮಿಸಲಾದ ಕಟ್ಟಡವು ಸ್ಥಗೀತಗೊಂಡು ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುತ್ತದೆ. ಹಾಗೂ ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ, ಉಪವಿಭಾಗ ಕುಮಟಾ ರವರು ಕಟ್ಟಡ ಉಪಯೋಗವಿಲ್ಲದಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಸದ್ರಿ ಪ್ರದೇಶದಿಂದ ಈವರೆಗೂ ಸರ್ಕಾರಕ್ಕೆ ಯಾವುದೇ ರೀತಿಯ ಆದಾಯವಾಗಲಿ ಅಭಿವೃದ್ಧಿಯಾಗಲಿ ಆಗಿದ್ದು ಇರುವುದಿಲ್ಲ.

ಪ್ರಸ್ತುತ ಉತ್ತರ ಕನ್ನಡ ಜಿಲ್ಲೆ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಗೋಕರ್ಣ ಗ್ರಾಮದ ಸ.ನಂ. 1567 ರ ಕ್ಷೇತ್ರ 1-38-00 ಪ್ರದೇಶವನ್ನು ಪ್ರವಾಸಿಗರ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸದರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ನಿರ್ಣಯಿಸಲಾಗಿರುತ್ತದೆ. ಸ್ಥಳಕ್ಕೆ ಅನುಗುಣವಾಗಿ ಆಸಕ್ತಿ ವ್ಯಕ್ತಪಡಿಸುವವರು ಸಲ್ಲಿಸುವ ಮಾದರಿಯನ್ನು ಸಮಿತಿಯಿಂದ ಅನುಮೋದನೆ ಮಾಡಿಕೊಳ್ಳುವ ಶರತ್ತು ಹಾಗೂ 15 ವರ್ಷ ಕರಾರು ಯಶಸ್ವಿಯಾಗಿ ಪೂರೈಸಿದಲ್ಲಿ ಮುಂದಿನ 15 ವರ್ಷಕ್ಕೆ ಕರಾರು ನವೀಕರಣ ಮಾಡಿಕೊಳ್ಳಲಾಗುವುದು. ಆಸಕ್ತಿ ಸಲ್ಲಿಸುವವರು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು Pre Qualification tender ಮೂಲಕ ಆಸಕ್ತಿ ಹೊಂದಿರುವುವವರ ಆಯ್ಕೆಗೆ ಟೆಂಡರ್ ಕರೆಯಲಾಗಿದ್ದು, ಕೇವಲ ಮೊದಲ ಹಂತದಲ್ಲಿ ತಾಂತ್ರಿಕ ಪರಿಣತಿಯನ್ನು ಹೊಂದಿರುವವರಿಗೆ ಮಾತ್ರ ಎರಡನೇ ಹಂತದಲ್ಲಿ ಆರ್ಥಿಕ ಬಿಡ್ ಸಲ್ಲಿಸಲು ಅವಕಾಶ ನೀಡುವ ನಿಯಮದ ಮೇರೆಗೆ ಟೆಂಡರ್ ಅನ್ನು ಕರೆಯಲಾಗಿದ್ದು, ಆಸಕ್ತರಿ ತಮ್ಮ ಆಸಕ್ತಿಯನ್ನು ದಿನಾಂಕ: 28-02-2020 ರಂದು ಸಾಯಂಕಾಲ 4.00 ಗಂಟೆ ಒಳಗಡೆ ತಮ್ಮ ಆಸಕ್ತಿಯನ್ನು ಸಲ್ಲಿಸಬಹುದಾಗಿದೆ. ಬಂದ ಬಿಡ್‌ಗಳ ತಾಂತ್ರಿಕ ಪರಿಶೀಲನೆ ದಿನಾಂಕ:28-02-2020 ರಂದು ಸಾಯಂಕಾಲ 5.00 ಗಂಟೆಗೆ ಹಾಜರಿರುವ ಆಸಕ್ತಿದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅವಧಿ ಮೀರಿ ಬಂದ ಆಸಕ್ತಿಗಳನ್ನು ಪರಿಗಣಿಸಲಾಗುವುದಿಲ್ಲ.